Publication :- Mysuru Mitra

Date :- 12-08-2016

Pg. No. :- 05.

ಸೆ.16 ರಿಂದ ಕೆಪಿಎಲ್ ಹಬ್ಬ

# 5ನೇ ಆವೃತ್ತಿಗೆ ಮೈಸೂರು ವಾರಿಯರ್ಸ್ ತಂಡ ಪ್ರಕಟ


Karbonn SMARTPHONES

KPL

A Tribute to S.D.N.R.Wadiyar

POWERED BY CYCLE PURE AGARBATHIES





ಮೈಸೂರು, ಆ.11– ಯಶಸ್ವಿಯಾಗಿ ನಾಲ್ಕು ಕೆಪಿಎಲ್ ಟೂರ್ನಿ ಮುಗಿದ ಬಳಿಕ ಇದೀಗ 5ನೇ ಕೆಪಿಎಲ್ ಪಂದ್ಯಾವಳಿ ಆರಂಭವಾಗಲಿದೆ. ಇದಕ್ಕಾಗಿ ಕಾರ್ಬನ್ ಸ್ಮಾರ್ಟ್ ಕೆಪಿಎಲ್ 5ನೇ ಆವೃತ್ತಿಗೆ ಮೈಸೂರು ವಾರಿಯರ್ಸ್‌ನ 18 ಆಟಗಾರರ ಹೊಸ ತಂಡ ಪ್ರಕಟವಾಗಿದ್ದು, ಈ ಬಾರಿ ಕೆಪಿಎಲ್ ಪ್ರಶಸ್ತಿ ಗೆಲ್ಲುವ ವಿಶ್ವಾಸವನ್ನು ತಂಡ ಹೊಂದಿದೆ.

ಮೈಸೂರಿನ ಸೈಕಲ್ ಪ್ಯೂರ್ ಅಗರ ಬತ್ತೀಸ್‌ನ ಪ್ರಾಯೋಜಕತ್ವದಲ್ಲಿ ಮುಂಬರುವ ಕಾರ್ಬನ್ ಸ್ಮಾರ್ಟ್ ಕೆಪಿಎಲ್ ಸರಣಿಯಲ್ಲಿ ಪ್ರತಿನಿಧಿಸುವ ಆಟಗಾರರ ಅಂತಿಮ ಪಟ್ಟಿ ಘೋಷಿಸಲಾಗಿದೆ. ಬುಧವಾರ ಬೆಂಗಳೂರಿನಲ್ಲಿ ನಡೆದ ಆಟಗಾರರ ಆಯ್ಕೆ ಪ್ರಕ್ರಿಯೆಯಲ್ಲಿ 18 ಆಟಗಾರರನ್ನು ಮೈಸೂರು ವಾರಿಯರ್ಸ್ ತಂಡದಲ್ಲಿ ಆಡಲು ಆಯ್ಕೆ ಮಾಡಲಾಯಿತು.

ಕೆಪಿಎಲ್ 5ನೇ ಆವೃತ್ತಿಯಲ್ಲಿ ಮನೀಷ್ ಪಾಂಡೆ, ಸುಚಿತ್, ಕೆ.ಗೌತಮ್ ಮತ್ತು ಅರ್ಜುನ್ ಹೊಯ್ಸಳ ಸೇರಿದಂತೆ ತಂಡದ ನಾಲ್ಕು ಆಟಗಾರರನ್ನು ಉಳಿಸಿಕೊಳ್ಳಲಾಗಿದೆ. ಇವರ ಅನುಭವ ತಂಡಕ್ಕೆ ಹೆಚ್ಚಿನ ಬಲ ನೀಡಲಿದೆ. ಪಂದ್ಯಾವಳಿಯಲ್ಲಿ ಏಳು ಫ್ರಾಂಚೈಸಿಗಳು ಪೈಪೋಟಿ ನೀಡಲಿವೆ ಎಂದು ಹೊಸ ತಂಡ ಘೋಷಿಸಿದ ಸೈಕಲ್ ಪ್ಯೂರ್ ಅಗರಬತ್ತೀಸ್‌ನ ಸಿಇಓ ಅರ್ಜುನ್ ರಂಗ ತಿಳಿಸಿದ್ದಾರೆ.

ಹೊಸ ತಂಡದಲ್ಲಿ ಸಾಕಷ್ಟು ಹೊಸ ಪ್ರತಿಭೆ ಮತ್ತು ಅನುಭವಿ ಆಟಗಾರರಿದ್ದಾರೆ. ಹೊಸ ತಂಡ ಅನುಭವಿ ಹಾಗೂ ಹೊಸ ಪ್ರತಿಭೆಗಳ ಮಿಶ್ರಣದೊಂದಿಗೆ ಅಂತಿಮ ರೂಪ ಪಡೆದ ಬಗ್ಗೆ ಸಂತೋಷವಾಗಿದೆ. ಪಂದ್ಯಾವಳಿಯಲ್ಲಿ ಈ ಬಾರಿ ಇನ್ನಷ್ಟು ಉತ್ತಮ ಮತ್ತು ಅತ್ಯಾಕರ್ಷಕ ಮನರಂಜನೆ ಎದುರು ನೋಡಬಹುದು ಎಂದು ಅವರು ಹೇಳಿದ್ದಾರೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಐಪಿಎಲ್ ಮಾದರಿಯಂತೆ ಟಿ.20 ಪಂದ್ಯಾವಳಿ ಏರ್ಪಡಿಸುತ್ತ ಬಂದಿದ್ದು, 8 ತಂಡಗಳ ನಡುವೆ ತುರುಸಿನ ಸ್ಪರ್ಧೆ ನಡೆಯಲಿದೆ. 2009ರಲ್ಲಿ ಆರಂಭಗೊಂಡ ಕೆಪಿಎಲ್ ಇದೀಗ 5ನೇ ವರ್ಷದ ಪ್ರದರ್ಶನ ನೀಡುತ್ತಿದ್ದು, ಇದೇ ಸೆ.16 ರಿಂದ ಆರಂಭವಾಗಲಿದೆ. ಪಂದ್ಯಾವಳಿಯ ಮೊದಲ ಹಂತವನ್ನು ಮೈಸೂರಿನಲ್ಲಿ ಆಯೋಜಿಸಲಾಗಿದ್ದು, ಎರಡನೇ ಹಂತವನ್ನು ಹುಬ್ಬಳ್ಳಿಯಲ್ಲಿ ಆಡಲಾಗುತ್ತದೆ ಮತ್ತು ಫೈನಲ್ ಪಂದ್ಯವನ್ನು ಸಹ ಹುಬ್ಬಳ್ಳಿಯಲ್ಲೇ ನಡೆಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

**ಮೈಸೂರು ವಾರಿಯರ್ಸ್ ತಂಡದ ಆಟಗಾರರಿವರು:** ಮನೀಷ್ ಪಾಂಡೆ, ಜೆ.ಸುಚೀತ್, ಕೆ.ಗೌತಮ್, ಅರ್ಜುನ್ ಹೊಯ್ಸಳ, ಜೋನಾಥನ್, ಅನಿರುದ್ಧ್ ಜೋಷಿ, ಆದಿತ್ಯ ಬಿ.ಸಾಗರ್, ರಾಜೂ ಭಟ್ಕಳ್, ವೈಶಾಕ್ ವಿಜಯ್ ಕುಮಾರ್, ಲಿಯಾನ್ ಖಾನ್, ನಿಹಾಲ್ ಉಳ್ಳಾಳ್, ಅಭಿಷೇಕ್ ಭಟ್, ಅಕ್ಷಯ್ ಕೊದಾತ್ತ್, ಆನಂದ್ ದೊಡ್ಡಮನಿ, ಕುಶಾಲ್ ವದವಾನಿ, ಆರ್.ಪ್ರತೀಕ್, ನಿಖಿತ್ ಎಸ್.ಸಂಗಂಕಲ್, ವಿ.ಕೌಶಿಕ್ ಹಾಗೂ ತರಬೇತುದಾರ ಆರ್‌ಎಕ್ಸ್ ಮುರಳಿ ತಂಡದಲ್ಲಿರುವ ಹೊಸ ಆಟಗಾರರಾಗಿದ್ದಾರೆ.